# Teacher-student ratio at 1:3; more PG med seats in offing

Rashmi Belur

**BENGALURU: The pool of post-graduate medical seats in the state will increase for the 2020-21 academic year as the Medical Council of India (MCI) has amended the existing rules and revised the teacher-student ratio.**

With the new amendments, MCI has given an opportunity even for the private medical colleges which are functioning for 15 years to maintain the same teacher-student ratio as in government medical colleges. With this, the earlier teacher-student ratio of 1:1 has been revised to 1:3.

Following the revised ratio, the colleges need to submit fresh applications to affiliating universities seeking enhancement of seats. As per the information available from Rajiv Gandhi University of Health Sciences (RGUHS), Bengaluru, some of the private medical colleges have already applied and got enhancement too.

## 400 more seats

Dr Sachidanand, vice-chancellor, RGUHS, said, "We are receiving applications from private medical colleges seeking enhancement based on the revised teacher-student ratio. As per our estimation, for the coming academic year, there will be over 400 more PG medical seats available for admission." However, the private medical colleges which are getting an enhancement of seats have to share seats with the government and this will benefit students aspiring to get PG medical seats under government quota.

"Even the government medical colleges will get more seats and some of them have already applied," said an official from the state department of medical education.

## Areas of shortage

According to experts, this revision is basically to overcome the shortage of specialists in some of the areas, including anaesthesiology, radiation oncology, psychiatry and forensic medicine and toxicology.

Dr Balakrishna P Shetty, vice-chancellor, Sri Siddartha University, Tumakuru, said, "There is a severe shortage of specialists in some areas and this revision of teacher-student ratio will help to overcome the same in future. This will also add thousands of PG seats at the national level."

Dr P G Girish, director department of medical education, said, "Earlier, the teacher-student ratio was 1:1 and for government colleges, it was revised a few months ago. The same has now been extended to private colleges with 15 years of functioning. This will definitely increase the number of PG medical seats in the state."

DH News Service

ವಿದ್ಯಾರ್ಥಿಗಳು, ಪ್ರಾಧ್ಯಾಪಕರ ಅನುಪಾತ 3:1ಕ್ಕೆ ಏರಿಕೆ

# ವೈದ್ಯ ಪಿಜಿ ಸೀಟು ಹೆಚ್ಚಳ

■ ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿ ಸ್ನಾತಕೋತ್ತರ ವೈದ್ಯಕೀಯ ಸೀಟುಗಳ ಹೆಚ್ಚಳಕ್ಕೆ ಅನುಮತಿ ನೀಡಿರುವ ಭಾರತೀಯ ವೈದ್ಯಕೀಯ ಮಂಡಳಿ (ಎಂಸಿಐ) ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರ ಅನುಪಾತವನ್ನು 3:1ಕ್ಕೆ ಏರಿಕೆ ಮಾಡಿದೆ.

ಇದುವರೆಗೆ, ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಅನುಪಾತ 1:1ರಷ್ಟಿತ್ತು. ಈ ನಿಯಮಕ್ಕೆ ಎಂಸಿಐ ತಿದ್ದುಪಡಿ ತಂದಿದ್ದು, ಮುಂಬರುವ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರಲಿದೆ. ಎಂಸಿಐನ ಈ ನಿರ್ಧಾರದಿಂದ ವೈದ್ಯಕೀಯ ಕಾಲೇಜುಗಳಲ್ಲಿ ಸ್ನಾತಕೋತ್ತರ ವೈದ್ಯಕೀಯ ಸೀಟುಗಳ ಸಂಖ್ಯೆ ದುಪ್ಪಟ್ಟಾಗಲಿದೆ.

ಸರಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರ ಅನುಪಾತ 1:3ಕ್ಕೆ ಹೆಚ್ಚಿಸಲಾಗಿದೆ. ಸಹ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳ ಅನುಪಾತವನ್ನು 1:2ಕ್ಕೆ ನಿಗದಿ ಮಾಡಲಾಗಿದೆ. ಖಾಸಗಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳ ಅನುಪಾತ 1:2ರಷ್ಟಿದ್ದು, ಸಹಾಯಕ ಪ್ರಾಧ್ಯಾಪಕರ ಅನುಪಾತ 1:1ಕ್ಕೆ ನಿಗದಿಪಡಿಸಲಾಗಿದೆ. ಈ ಅನುಪಾತವು ಅನಸ್ತೇಷಿಯಾ, ರೇಡಿಯೇಷನ್ ಅಂಕೋಲಜಿ, ಮನೋ ವೈದ್ಯಶಾಸ್ತ್ರ ವಿಭಾಗ, ಫೊರೆನ್ಸಿಕ್ ಮೆಡಿಸನ್, ವಿಷ ವೈದ್ಯ ವಿಭಾಗಗಳಿಗೂ (ಟಾಕ್ಸಿಕಾಲಜಿ) ಅನ್ವಯವಾಗಲಿದೆ.

- ವೈದ್ಯ ಕಾಲೇಜುಗಳು: 64
- ಒಟ್ಟು ಸ್ನಾತಕೋತ್ತರ ಸೀಟುಗಳು: 3,711
- ರಾಜೀವ್‌ಗಾಂಧಿ ಆರೋಗ್ಯ ವಿವಿ ವ್ಯಾಪ್ತಿ: 2,598 ಸೀಟುಗಳು
- ಡೀಮ್ಡ್ ವಿವಿ ವ್ಯಾಪ್ತಿ: 1,113 ಸೀಟುಗಳು

ಸರಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಅರೆ ವೈದ್ಯಕೀಯ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರ ಅನುಪಾತ 3:1, ಖಾಸಗಿ ಕಾಲೇಜುಗಳಲ್ಲಿ 2:1ರಷ್ಟು ಹಾಗೂ ಸಹ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳ ಅನುಪಾತ ಸರಕಾರಿ ಕಾಲೇಜುಗಳಲ್ಲಿ 1:2 ಮತ್ತು ಖಾಸಗಿ ಕಾಲೇಜುಗಳಲ್ಲಿ 1:1ರಷ್ಟು ಇರಲಿದೆ.

**ಉತ್ತಮ ನಿರ್ಧಾರ:** ''ರಾಜ್ಯದಲ್ಲಿ ಸ್ನಾತಕೋತ್ತರ ವೈದ್ಯಕೀಯ ಸೀಟುಗಳ ಸಂಖ್ಯೆಯನ್ನು ಹೆಚ್ಚಳ ಮಾಡುವ ಅಗತ್ಯವಿತ್ತು. ಹಾಗಾಗಿ, ಎಂಸಿಐ ತೆಗೆದುಕೊಂಡಿರುವ ಈ ನಿರ್ಧಾರ ಉತ್ತಮವಾದದ್ದು. ಮುಂಬರುವ ಶೈಕ್ಷಣಿಕ ವರ್ಷದಿಂದ 3:1ರ ಅನುಪಾತದಲ್ಲಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಸಂಖ್ಯೆ ಜಾರಿಗೆ ಬರಲಿದೆ. ಹಾಗಾಗಿ, ಸ್ನಾತಕೋತ್ತರ ವೈದ್ಯಕೀಯ ಸೀಟುಗಳ ಸಂಖ್ಯೆ ಹೆಚ್ಚಳವಾಗಲಿವೆ,'' ಎಂದು ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕ ಡಾ.ಪಿ.ಜಿ.ಗಿರೀಶ್ ತಿಳಿಸಿದ್ದಾರೆ.

ವಿಜಯ ಕರ್ನಾಟಕ



# ವೈದ್ಯರು ಅಸ್ವಸ್ಥ ಮಹಿಳೆಗೆ ನಿರ್ಲಕ್ಷಿಸಿದ್ದೇ ತಪ್ಪು

## ಆರ್‌ಎಲ್‌ಜೆ ಆಸ್ಪತ್ರೆಗೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿಬಾಯಿ ಭೇಟಿ



ಕೆಜಿಎಫ್ ಸರಕಾರಿ ಆಸ್ಪತ್ರೆಯಲ್ಲಿ ಗರ್ಭಿಣಿ ನರಳಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಕೋಲಾರದ ಆರ್ ಎಲ್ ಜಾಲಪ್ಪ ಆಸ್ಪತ್ರೆಗೆ ಭೇಟಿ ನೀಡಿದ್ದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿಬಾಯಿ ಮಹಿಳೆಯ ಆರೋಗ್ಯ ವಿಚಾರಿಸಿದರು.

■ **ವಿಕ ಸುದ್ದಿಲೋಕ ಕೋಲಾರ**

ಹೆರಿಗೆಗಾಗಿ ಬಂದಿದ್ದ ಮಹಿಳೆ ಅಸ್ವಸ್ಥಳಾಗಿ ದ್ದರೂ ಕನಿಷ್ಠ ಸಲಹೆಯನ್ನೂ ನೀಡದೆ ವೈದ್ಯರು ನಿರ್ಲಕ್ಷಿಸಿದ್ದೇ ತಪ್ಪು, ಹೀಗಾಗಿ ಕರ್ತವ್ಯಲೋಪ ಮೇಲ್ನೋಟಕ್ಕೆ ಕಂಡು ಬಂದಿದೆ. ಘಟನೆ ಕುರಿತು ಸಮಗ್ರ ವರದಿ ನೀಡಲು ಡಿಸಿ, ಎಸ್ಪಿಗೆ ಪತ್ರ ಬರೆಯುವು ದಾಗಿ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷ ನಾಗಲಕ್ಷ್ಮಿಬಾಯಿ ತಿಳಿಸಿದರು.

ಕೆಜಿಎಫ್ ಸರಕಾರಿ ಆಸ್ಪತ್ರೆಯಲ್ಲಿ ವೈದ್ಯರ ನಿರ್ಲಕ್ಷ್ಯದಿಂದಾಗಿ ನರಳಾಡಿದ್ದ ಅಸ್ವಸ್ಥ ಮಹಿಳೆ ಸಮೀನಾ ಕೋಲಾರದ ಆರ್‌ಎಲ್ ಜಾಲಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಹಿನ್ನೆಲೆಯಲ್ಲಿ ಭೇಟಿ ನೀಡಿದ್ದ ವೇಳೆ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಕಳೆದ 3 ದಿನಗಳ ಹಿಂದೆ ಕೆಜಿಎಫ್ ಆಸ್ಪತ್ರೆಯಲ್ಲಿ ನಡೆದಿರುವ ಘಟನೆಯು ಸಾಮಾಜಿಕ ಜಾಲತಾಣಗಳಲ್ಲಿ ಹರಿ ದಾಡಿದೆ. ಘಟನೆಗೆ ಸಂಬಂಧಿಸಿದಂತೆ ವೈದ್ಯರ ಹೇಳಿಕೆ ಪಡೆಯಲಾಗಿದ್ದರೂ ಮಹಿಳೆಗೆ ಸೂಕ್ತ ನ್ಯಾಯ ನೀಡಲು ಸಾಧ್ಯ ವಾಗಿಲ್ಲ, ಹಾಗಾಗಿ ಮಹಿಳೆಯನ್ನು ಭೇಟಿ ಮಾಡಿದ್ದು, ವೈದ್ಯರ ಹೇಳಿಕೆಗೆ ತದ್ವಿ ರುದ್ಧವಾದ ಹೇಳಿಕೆಯನ್ನು ಮಹಿಳೆ ನೀಡಿ ದ್ದಾರೆ. ಆಸ್ಪತ್ರೆಗೆ ಬಂದಾಗ ಯಾವುದೇ ಸ್ಥಿತಿಯಲ್ಲಿದ್ದರೂ ಕನಿಷ್ಠ ಅವರಿಗೆ ಚಿಕಿತ್ಸೆ ಯನ್ನು ನೀಡಬೇಕಿತ್ತು, ಅಷ್ಟು ದೊಡ್ಡ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಯಂತ್ರವಿಲ್ಲದೆ ಬೇರೆ ಕಡೆಗೆ ಹೋಗಲು ಸೂಚಿಸಿದ್ದಾರೆ. ಅಲ್ಲದೆ ಹೆರಿಗೆಗೆ ನಾಳೆ ಬಾ ಎಂದು ಹೇಳಿರುವುದು ಖಂಡನೀಯವಾಗಿದೆ ಎಂದು ಅಸಮಧಾನ ವ್ಯಕ್ತಪಡಿಸಿದರು. ಸ್ಕ್ಯಾನಿಂಗ್‌ಗೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆಯ ಜವಾಬ್ದಾರಿ ಮುಖ್ಯ ಎಂದರು.

ಮಹಿಳೆಗೆ ಸಾಮಾನ್ಯ ಹೆರಿಗೆಯಾಗಿದ್ದು, ಮಗು ಮೃತಪಟ್ಟಿದೆ. ಮಹಿಳೆಯ ಜೀವ ಉಳಿಸಿದ್ದು, ಆರೋಗ್ಯವಾಗಿದ್ದಾರೆ ಎನ್ನುವುದಷ್ಟೇ ಸಮಾಧಾನಕರ ಸಂಗತಿಯಾಗಿದೆ. ಸರಕಾರಿ ಆಸ್ಪತ್ರೆಗೆ ಹೆಚ್ಚಾಗಿ ಬಡವರು ಬರುತ್ತಾರೆ, ವೈದ್ಯರನ್ನು ದೇವರು ಎನ್ನುತ್ತಾರೆ. ಅಂತಹ ವೈದ್ಯರು ದೆವ್ವದಂತೆ ವರ್ತಿಸುವುದು ಸರಿಯಲ್ಲ, ಘಟನೆಗೆ ಸಂಬಂಧಿಸಿದಂತೆ ಒಂದೆರೆಡು ದಿನದಲ್ಲಿ ವರದಿ ಪಡೆದುಕೊಂಡು ಆ ಬಳಿಕ ಮುಂದಿನ ಕ್ರಮಜರುಗಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಎನ್. ವಿಜಯ್‌ಕುಮಾರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿ ಎಂ.ಸೌಮ್ಯ ಮತ್ತಿತರರು ಉಪಸ್ಥಿತರಿದ್ದರು.

ಉದಯವಾಣಿ



# ಗರ್ಭಿಣಿ ವಿರುದ್ಧ ನಿರ್ಲಕ್ಷ್ಯ: ಡೀಸಿಗೆ ಪತ್ರ ರವಾನೆ ಚಿಂತನೆ



ಅಸ್ವಸ್ಥ ಮಹಿಳೆ ಸಮೀನಾ ಕೋಲಾರದ ಆರ್‌ಎಲ್ ಜಾಲಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀಬಾಯಿ ಭೇಟಿ ನೀಡಿದರು.

**ಕೋಲಾರ:** ಹೆರಿಗೆಗಾಗಿ ಬಂದಿದ್ದ ಮಹಿಳೆಯು ಅಸ್ವಸ್ಥಳಾಗಿದ್ದರೂ ಚಿಕಿತ್ಸೆ ನೀಡದೆ ವೈದ್ಯರು ನಿರ್ಲಕ್ಷಿಸಿದ್ದೇ ತಪ್ಪು. ಹೀಗಾಗಿ ಕರ್ತವ್ಯಲೋಪ ಮೇಲ್ನೋಟಕ್ಕೆ ಕಂಡು ಬಂದಿದೆ. ಘಟನೆ ಕುರಿತು ಸಮಗ್ರ ವರದಿ ನೀಡಲು ಡಿಸಿ, ಎಸ್ಪಿಗೆ ಪತ್ರ ಬರೆಯುವುದಾಗಿ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀಬಾಯಿ ತಿಳಿಸಿದರು.

ಕೆಜಿಎಫ್ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರ ನಿರ್ಲಕ್ಷ್ಯದಿಂದಾಗಿ ನರಳಾಡಿದ್ದ ಅಸ್ವಸ್ಥ ಮಹಿಳೆ ಸಮೀನಾ ಕೋಲಾರದ ಆರ್‌ಎಲ್ ಜಾಲಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಹಿನ್ನೆಲೆಯಲ್ಲಿ ಭೇಟಿ ನೀಡಿದ್ದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದರು.

ಕಳೆದ 3 ದಿನಗಳ ಹಿಂದೆ ಕೆಜಿಎಫ್ ಆಸ್ಪತ್ರೆಯಲ್ಲಿ ನಡೆದಿರುವ ಘಟನೆಯು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. ಘಟನೆಗೆ ಸಂಬಂಧಿಸಿದಂತೆ ವೈದ್ಯರ ಹೇಳಿಕೆ ಪಡೆಯಲಾಗಿದ್ದರೂ ಮಹಿಳೆಗೆ ಸೂಕ್ತ ನ್ಯಾಯ ನೀಡಲು ಸಾಧ್ಯವಾಗಿಲ್ಲ, ಹಾಗಾಗಿ ಮಹಿಳೆಯನ್ನು ಬೇಟಿ ಮಾಡಿದ್ದು, ವೈದ್ಯರ ಹೇಳಿಕೆಗೆ ತದ್ವಿರುದ್ಧವಾದ ಹೇಳಿಕೆಯನ್ನು ಮಹಿಳೆ ನೀಡಿದ್ದಾರೆ. ಆಸ್ಪತ್ರೆಗೆ ಬಂದಾಗ ಯಾವುದೇ ಸ್ಥಿತಿಯಲ್ಲಿದ್ದರೂ ಕನಿಷ್ಠ ಅವರಿಗೆ ಚಿಕಿತ್ಸೆ ನೀಡಬೇಕಿತ್ತು, ಅಷ್ಟು ದೊಡ್ಡ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಯಂತ್ರವಿಲ್ಲದೆ ಬೇರೆ ಕಡೆಗೆ ಹೋಗಲು ಸೂಚಿಸಿದ್ದಾರೆ. ಅಲ್ಲದೆ ಹೆರಿಗೆಗೆ ನಾಳೆ ಬಾ ಎಂದು ಹೇಳಿರುವುದು ಖಂಡನೀಯವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಸ್ಕ್ಯಾನಿಂಗ್‌ಗೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆಯ ಜವಾಬ್ದಾರಿ ಮುಖ್ಯ ಎಂದರು.

ಮಹಿಳೆಗೆ ಸಾಮಾನ್ಯ ಹೆರಿಗೆಯಾಗಿದ್ದು, ಮಗು ಮೃತಪಟ್ಟಿದೆ. ಮಹಿಳೆಯ ಜೀವಉಳಿಸಿದ್ದು, ಆರೋಗ್ಯವಾಗಿದ್ದಾರೆ. ಸರ್ಕಾರಿ ಆಸ್ಪತ್ರೆಗೆ ಹೆಚ್ಚಾಗಿ ಬಡವರು ಬರುತ್ತಾರೆ. ಘಟನೆಗೆ ಸಂಬಂಧಿಸಿದಂತೆ ಒಂದೆರೆಡು ದಿನದಲ್ಲಿ ವರದಿ ಪಡೆದುಕೊಂಡು ಆ ಬಳಿಕ ಮುಂದಿನ ಕ್ರಮ ಜರುಗಿಸುವುದಾಗಿ ಹೇಳಿದರು.

ಈ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಎನ್.ವಿಜಯ್‌ಕುಮಾರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಕಾರಿ ಎಂ.ಸೌಮ್ಯ ಮತ್ತಿತರರು ಉಪಸ್ಥಿತರಿದ್ದರು.